ಓಎಸ್ 239/2024

ಡಿಡಬ್ಲ್ಯೂ

**ಸಾಕ್ಷಿಯು ದಿಃ 28.03.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: ವಾದಿ ಪರ ವಕೀಲರಿಂದ**

ವಾದಿಯು ಖರೀದಿ ಮಾಡಿರುವ ಜಮೀನಿನ ಸರ್ವೇ ನಂಬರ್ 159/1 ಆಗಿದ್ದು, 2 ಎಕರೆ ವಿಸ್ತೀರ್ಣ ಇರುತ್ತದೆ ಎಂದರೆ ಸಾಕ್ಷಿಯು ನನಗೆ ಎಷ್ಟು ಎಕರೆ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವ ಆಸ್ತಿಯ ಪಶ್ಚಿಮಕ್ಕೆ ನಮಗೆ ಸೇರಿದ ಜಮೀನು ಇರುತ್ತದೆ ಎಂದರೆ ಸರಿ. ಚಿಕ್ಕಣಪ್ಪ ರವರು ನನ್ನ ತಂದೆ ಎಂದರೆ ಸರಿ. ದಾವ ಆಸ್ತಿಯ ಪೂರ್ವಕ್ಕೆ ನಾಗೇಶ ರವರ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ದಾವ ಆಸ್ತಿಯ ಉತ್ತರಕ್ಕೆ ಸುಬ್ಬಪ್ಪ ರವರ ಜಮೀನು ಮತ್ತು ದಕ್ಷಿಣಕ್ಕೆ ನಾಗಮಲ್ಲಪ್ಪ ರವರ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ದಾವ ಆಸ್ತಿಯು ವಾದಿಯ ಹೆಸರಿನಲ್ಲಿ ಖಾತೆ ಇದೆ ಎಂದರೆ ಸಾಕ್ಷಿಯು ಇರಬಹುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ನಿಡಿ 2 ಪಹಣಿ ದಾವ ಆಸ್ತಿಗೆ ಸಂಬಂಧಿಸಿದಾಗಿದ್ದು ವಾದಿಯ ಹೆಸರಿನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ದಾವ ಆಸ್ತಿಯನ್ನು ವಾದಿಯು 2016 ರಲ್ಲಿ ಖರೀದಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯು ದಾವ ಆಸ್ತಿಯಲ್ಲಿ ವ್ಯವಸಾಯ ಮಾಡಿಕೊಂಡು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಸರ್ವೇ ನಂಬರ್ 159/1 ರಲ್ಲಿ ವಾದಿಯು ಸ್ವಾಧೀನದಲ್ಲಿದ್ದು, ಸರ್ವೇ ನಂಬರ್ 159/2 ರಲ್ಲಿ ನಾನು ಸ್ವಾಧೀನದಲ್ಲಿದ್ದೇನೆ ಎಂದರೆ ಸರಿ. ಸರ್ವೇ ನಂಬರ್ 159/1 ರಲ್ಲಿ ವಾದಿಗೆ ಯಾವುದೇ ಹಕ್ಕು ಸ್ವಾಧೀನ ಇಲ್ಲ ಎಂದು ನಾನು ನನ್ನ ಸಾಕ್ಷಿ ಪ್ರಮಾಣ ಪತ್ರ ಬರೆಸಿದ್ದೇನೆ ಇಲ್ಲವೋ ನನಗೆ ಗೊತ್ತಿಲ್ಲ.

2 ವರ್ಷಗಳ ಹಿಂದೆ ನಾವು ದಾವ ಆಸ್ತಿಗೆ ಸಂಬಂಧಿಸಿದಂತೆ ವಾದಿಗೆ ತೊಂದರೆ ಕೊಟ್ಟಿದ್ದೇವೆ ಎಂದು ವಾದಿಯು ಪೊಲೀಸರಿಗೆ ದೂರು ನೀಡಿದದರು ಎಂದರೆ ಸಾಕ್ಷಿಯು ದೂರು ನೀಡಿದ್ದರು ಆದರೆ ನಾವು ತೊಂದರೆ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಕಳೆದ 3 ತಿಂಗಳ ಹಿಂದೆಯು ಸಹ

ಓಎಸ್ 239/2024

ಡಿಡಬ್ಲ್ಯೂ

ವಾದಿಯ ದಾವ ಆಸ್ತಿಗೆ ತೊಂದರೆ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ದಾವ ಆಸ್ತಿಯ ತಂತಿ ಕಂಭವನ್ನು ಮುರಿದು, ಮೋಟರ್ ಪೈಪ್ ಗಳನ್ನು ಮುರಿದು ವಾದಿಗೆ ತೊಂದರೆ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ದಿನಾಂಕ 05.01.2024 ರಂದು ವಾದಿಯು ದಾವ ಆಸ್ತಿಯಲ್ಲಿ ಬೇಸಾಯ ಮಾಡಲು ತೊಂದರೆ ಕೊಟ್ಟಿದ್ದೇವೆ ಮತ್ತು ಪದೇ ಪದೇ ಅಡ್ಡಿಪಡಿಸಿದ್ದೇವೆ ಎಂದರೆ ಸರಿಯಲ್ಲ. ದಾವ ಆಸ್ತಿಯ ಮೇಲೆ ನಮಗೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ